ಸ್ಥಾಪನೆ : 1966
ನೋಂದಣಿ ಸಂಖ್ಯೆ : ಡಿ.ವೈ.ಆರ್.443

ಪ್ರಧಾನ ಕಛೇರಿ : 080–23151204, 23152073
ಬಸವೇಶ್ವರನಗರ ಶಾಖೆ : 080–23231238, 23232587
ಅನ್ನಪೂರ್ಣೇಶ್ವರಿನಗರ ಶಾಖೆ : 080–23183734
e-mail : contact@rcbl.co

# ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ನಂ–741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

## 54ನೇ ಸರ್ವಸದಸ್ಯರ ವರ್ಚುಯಲ್ ಸಭೆಯ ಸೂಚನಾ ಪತ್ರ

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ : ಸಇ 60 ಸಿಎಲ್‌ಎಮ್ 2021 (ಇ) ಬೆಂಗಳೂರು, ದಿನಾಂಕ 04.08.2021ರಂತೆ ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದ 2ನೇ ಅಲೆಯ ಕಾರಣದಿಂದ ಹಾಗೂ 3ನೇ ಅಲೆ ವ್ಯಾಪಿಸುವ ಸಾಧ್ಯತೆ ಇರುವ ಬಗ್ಗೆ ತಜ್ಞರು ಅಭಿಪ್ರಾಯ ಪಟ್ಟಿರುವ ಹಿನ್ನಲೆಯಲ್ಲಿ ಸಹಕಾರ ಸಂಘಗಳ ವಾರ್ಷಿಕ ಸಾಮಾನ್ಯ ಸಭೆಯನ್ನು Video Conference / Virtual Meeting ಮೂಲಕ ನಡೆಸುವ ಆದೇಶದಂತೆ, ದಿನಾಂಕ 31–03–2021ಕ್ಕೆ ಮುಕ್ತಾಯಗೊಂಡ ಬ್ಯಾಂಕಿನ (2020–21ನೇ ಸಾಲಿನ) 54ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 31–10–2021 ರಂದು ಭಾನುವಾರ ಬೆಳಿಗ್ಗೆ 10–00 ಘಂಟೆಗೆ ಬ್ಯಾಂಕಿನ ಗೌರವ ಅಧ್ಯಕ್ಷರಾದ ಶ್ರೀ. ಕೆ.ಎಲ್. ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿ Video Conference / Virtual Meeting ಮೂಲಕ ನಡೆಸಲಾಗುವುದು. ಸದಸ್ಯರು ಅನುವು ಮಾಡಿಕೊಂಡು ಲಿಂಕ್ https://viewnow.in/rcbl.in/ ಮುಖಾಂತರ ಸಭೆಗೆ ಸಕಾಲಕ್ಕೆ ಸೇರಿಕೊಳ್ಳಲು ಕೋರಲಾಗಿದೆ.

## ಕಾರ್ಯಕ್ರಮಗಳು

1. ಪ್ರಾರ್ಥನೆ
2. ಅಧ್ಯಕ್ಷರಿಂದ ಸ್ವಾಗತ ಭಾಷಣ
3. ಚಿರಸ್ಮರಣೆ.
4. ಸರ್ವಸದಸ್ಯರ ಸಭೆಯ ಮೀಟಿಂಗ್ ನೋಟಿಸನ್ನು ಓದುವುದು.
5. 2019–20ನೇ ಸಾಲಿನ ಸರ್ವಸದಸ್ಯರ ಸಭೆಯ ನಡೆವಳಿಗಳನ್ನು ಓದಿ ದಾಖಲು ಮಾಡುವುದು.
6. 2020–21ನೇ ಸಾಲಿನ ಕಾರ್ಯಕಾರಿ ಸಮಿತಿಯ ವಾರ್ಷಿಕ ವರದಿಯ ಅಂಗೀಕಾರ
7. 2020–21ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿಯ ಅಂಗೀಕಾರ.
8. 2020–21ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
9. 2021–22ನೇ ಸಾಲಿನ ಅಂದಾಜು ಆಯ–ವ್ಯಯಗಳ ಅಂಗೀಕಾರ
10. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಪಟ್ಟಿ ಮಾಡಿರುವ ಪೈಕಿ 2021–22ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಿಸುವ ಬಗ್ಗೆ (ಆರ್.ಬಿ.ಐ ರವರ ಅನುಮತಿಗೊಳಪಟ್ಟು)
11. ಉಪವಿಧಿಗಳ ತಿದ್ದುಪಡಿಗೆ ಒಪ್ಪಿಗೆ (ಸರ್ಕಾರದ ಅನುಮೋದನೆ ಮೇರೆಗೆ)
12. 2019–20ನೇ ಸಾಲಿನ ಉಳಿದಲಾಭಾಂಶವನ್ನು ವಿಶೇಷ ಬಿ.ಡಿ.ಡಿ.ಆರ್ ನಿಧಿಗೆ ವರ್ಗಾಯಿಸಿರುವ ಬಗ್ಗೆ ದೃಢೀಕರಣ.
13. ಸದಸ್ಯರುಗಳಿಂದ ಬಂದ ವಿಷಯಗಳ ಪರಿಶೀಲನೆ.
14. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬೇಕಾದ ಇತರೆ ವಿಷಯಗಳು.
15. ವಂದನಾರ್ಪಣೆ

ಸ್ಥಳ : ಬೆಂಗಳೂರು
ದಿನಾಂಕ : 08/10/2021

**ಕಾರ್ಯಕಾರಿ ಮಂಡಳಿ ಆಜ್ಞೆಯ ಮೇರೆಗೆ**
**ಸಹಿ/–**
**(ಆರ್.ಗೋವಿಂದರಾಜು)**
**ಮುಖ್ಯ ಕಾರ್ಯ ನಿರ್ವಹಣಾಧಿಕಾರಿ**

### ಉಪವಿಧಿಗಳ (ಬೈಲಾ) ಸಮಗ್ರ ತಿದ್ದುಪಡಿ ಪ್ರಸ್ತಾವನೆ

| ಕ್ರಂ ಸಂ | ಉಪವಿಧಿ ಸಂಖ್ಯೆ | ಹಾಲಿ ಇರುವ ಉಪಬಂಧ | ಉದ್ದೇಶಿತ ತದ್ದುಪಡಿ |
|---|---|---|---|
| 1 | 20 | ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಟ ಸೇವೆಗಳು : (iii) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಟ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಇಪ್ಪತ್ತು (20) ಇರತಕ್ಕದ್ದು | ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಟ ಸೇವೆಗಳು : (iii) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಟ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ನಾಲ್ಕು (4) ಇರತಕ್ಕದ್ದು |
| 2 | 108 | ನಿವ್ವಳ ಲಾಭ ವಿಭಜನಾ ಕ್ರಮ : (ಕೆ) ಶೇಕಡಾ 10ಕ್ಕೆ ಮೀರದಂತೆ ಹೂಡಿಕೆಗಳ ಏರಿಳಿತ ನಿಧಿಗೆ | ನಿವ್ವಳ ಲಾಭ ವಿಭಜನಾ ಕ್ರಮ : (ಕೆ) ಶೇಕಡಾ 15ಕ್ಕೆ ಮೀರದಂತೆ ಹೂಡಿಕೆಗಳ ಏರಿಳಿತ ನಿಧಿಗೆ |

## ವಿಶೇಷ ಸೂಚನೆ

1) ಸದಸ್ಯರು ವಾರ್ಷಿಕ ವರದಿ ಪುಸ್ತಕವನ್ನು ದಿನಾಂಕ 21–10–2021 ರಿಂದ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆಯಬಹುದು.
2) ಬ್ಯಾಂಕಿಗೆ ಬಂದು ಪಡೆಯಲು ಸಾಧ್ಯವಾಗದ ಸದಸ್ಯರು ಬ್ಯಾಂಕಿನ ವೆಬ್‌ಸೈಟ್ www.rcbl.co ನಲ್ಲಿ ಪ್ರಚುರಗೊಳಿಸಿರುವ ವಾರ್ಷಿಕ ವರದಿಯನ್ನು ಓದಬಹುದು.
3) ವಿಷಯ 13ಕ್ಕೆ ಸಂಬಂಧಿಸಿದಂತೆ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲು ಇಚ್ಛೆಯುಳ್ಳ ಸದಸ್ಯರು ದಿನಾಂಕ 25–10–2021ರ ಒಳಗೆ ಚರ್ಚಿಸಬೇಕಾದ ವಿಷಯದ ಬಗ್ಗೆ ಲಿಖಿತ ಪತ್ರವನ್ನು ವ್ಯವಸ್ಥಾಪಕರಿಗೆ ಸಲ್ಲಿಸಬಹುದಾಗಿದೆ. ಪೂರ್ವಲಿಖಿತ ಪತ್ರ ಸಲ್ಲಿಸಿದ ಸದಸ್ಯರುಗಳಿಗೆ ಮಾತ್ರ ಆಡಳಿತ ಮಂಡಳಿಯವರೊಂದಿಗೆ Virtual Meeting ನಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಲಾಗುವುದು.
4) ಸಾಮಾನ್ಯ ಸಭೆ ನಡವಳಿಯಲ್ಲಿ ಪ್ರಶ್ನಿಸ ಬಯಸುವ ಸದಸ್ಯರು, ಅವರ ಪ್ರಶ್ನೆಗಳನ್ನು Chat Box ನಲ್ಲಿ ನಮೂದಿಸುವುದು.
5) ಸದಸ್ಯರು ತಮ್ಮ ಇ–ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ಬ್ಯಾಂಕಿಗೆ ನೀಡಿ ನೋಂದಾಯಿಸಿಕೊಳ್ಳತಕ್ಕದ್ದು.

**Meeting Joining Process :**

- Clink on the link https://viewnow.in/rcbl.in/
- Enter your Name & Membership No. & click REGISTER / JOIN LIVE button
- You will be redirected to ZOOM page
- Down-load ZOOM application & click JOIN WITH COMPUTER AUDIO
- Allow application to use camera & Mic by clicking JOIN AUDIO & CALL OVER INTERNET
- To ask question – click on "REACTIONS" & RAISE HAND option & wait for Moderator to unmute you.
- Once prompted to speak, un-mute your MIC by pressing UN-MUTE button & speak
- Click on PARTICIPANTS to view list of participants who are present in meeting.
- When the session ends, you may click the "LEAVE" button to exit meeting.

Please scan below QR code for Joining for Meeting

ಗೆ,

ತೆರೆದ ಅಂಚೆ

ಅಂಚೆ ಬಡವಾಡೆಯಾಗದಿದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ ಹಿಂತಿರುಗಿಸಿ.

ಇಂದ,

**ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

**ನಂ–741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**